

ಗುಂಡ: ಸಮೀಕ್ಷೆಯ ಅನುಸಾರ ಶೇ.40 ಪುರುಷರು ಪತ್ನೀ ಪೀಡಿತರಾಗಿದ್ದಾರೆ ಸರ್

ಮೇಲಧಿಕಾರಿ: ಉಳಿದವರು?

ಗುಂಡ: ಉಳಿದ ಶೇ. 60 ಪುರುಷರು ತಮ್ಮ ಪತ್ನಿಗೆ ಹೆದರಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲೇ ಇಲ್ಲ ಸಾರ್!

★★★

ಗುಂಡನಿಗೂ ಹೆಂಡತಿಗೂ ಜಗಳವಾಗಿ ಗುಂಡ ಹೆಂಡತಿಯನ್ನು ಸೀದಾ ಆಸ್ಪತ್ರೆಗೆ ಎಳೆದುಕೊಂಡು ಡಾಕ್ಟರ್ ಬಳಿ ಬಂದ.

ಗುಂಡ: ಒಂದೊಂದು ಸಾರಿ ಸಿಟ್ಟು ಇಷ್ಟು ಬರುತ್ತಲ್ಲ, ನನ್ನ ಹೆಂಡತೀನ ಸಾಯಿಸಬೇಕು ಅನಿಸುತ್ತೆ.

ಡಾಕ್ಟರ್: ಹಾಗೆಲ್ಲ ಅಂದುಕೋಬೇಡಿ, ಅದು ನಮ್ಮ ಕೆಲಸ.

★★★

ರಾಮು: ಏನೋ, ಕಳೆದ ವಾರ ಆತ್ಮಹತ್ಯೆ ಮಾಡ್ಕೊತೀನಿ ಅಂದಿಯಂತೆ.

ಗುಂಡ: ಹೆಂಡತಿಯೊಂದಿಗೆ ಜಗಳವಾದಾಗಲೆಲ್ಲ ಸ್ವಯಂ ಆತ್ಮಹತ್ಯೆ ಮಾಡಿ ಕೊಳ್ಳೋಣ ಎನ್ನುವ ಮನಸ್ಸಾಗುತ್ತದೆ. ಆದರೆ ಅನಂತರ 'ನಮ್ಮ ದೇಶದಲ್ಲಿ ಈಗ ಹುಲಿಗಳಾದರೂ ಅದೆಷ್ಟು ಉಳಿದಿವೆ?' ಎಂದು ಧನಾತ್ಮಕವಾಗಿ ಯೋಚಿಸಿ ಸುಮ್ಮನಾಗುತ್ತೇನೆ.

★★★

ಹವಾಮಾನ ಕಚೇರಿಯಲ್ಲಿ ಕೆಲಸ ಮಾಡುವ ಅಧಿಕಾರಿ ತಮ್ಮ ಕೆಲಸ ಮುಗಿಸಿ ಕೆಳಗೆ ಬಂದ ನಂತರ ಸಹಾಯಕನನ್ನು ಕರೆದು ಹೇಳಿದರು: 'ಮೇಲೆ ಕಿಟಕಿ ಬಾಗಿಲು ಹಾಕಿದ್ದೀಯಾ ತಾನೆ! ಈ ಹಾಳಾದ ಮಳೆ ಯಾವಾಗ ಬರುತ್ತೇಂತ ಹೇಳೋಕೆ ಬರೋದಿಲ್ಲ!'

★★★

ಗುಂಡನ ಒಂದು ಕಾಲಿನ ಮೂಳೆ ಮುರಿದಿತ್ತು. ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಾದ, ಅಲ್ಲಿ ತನ್ನ ಪಕ್ಕದ ಹಾಸಿಗೆಯಲ್ಲಿ ಎರಡೂ ಕಾಲುಗಳು ಮುರಿದಿರುವ ಒಬ್ಬಾತ ಮಲಗಿರುವುದನ್ನು ಕಂಡು ಕುತೂಹಲದಿಂದ ಕೇಳಿದ. 'ನಿಮಗೆ ಇಬ್ಬರು ಪತ್ನಿಯರು ಇರುವರೆ?'

★★★

ಗುಂಡ ನಿಗೂಢವಾಗಿ ತನ್ನ ಮಡದಿಯ ಮೊಬೈಲ್‌ನಲ್ಲಿ ಬ್ಲೂವೇಲ್ ಗೇಮ್ ಡೌನ್‌ಲೋಡ್ ಮಾಡಿದ.

ಅನಂತರ ಸರಿಯಾಗಿ 50 ದಿನಗಳ ಬಳಿಕ ಬ್ಲೂವೇಲ್ ಸ್ವಯಂ ಆತ್ಮಹತ್ಯೆ ಮಾಡಿಕೊಂಡಿತು.

(ಸಂಗ್ರಹ) **ಕುಬೇರಪ್ಪ ಎಂ.ವಿಭೂತಿ, ಹರಿಹರ**

ಡಾಕ್ಟರ್: ಆಪರೇಷನ್ ಆದ ಕೂಡಲೇ ನೀವು ನಡೆದುಕೊಂಡೇ ಮನೆಗೆ ಹೋಗಬಹುದು.

ಪೇಷಂಟ್: ಆಟೋಗೂ ದುಡ್ಡು ಉಳಿಯಲ್ವಾ ಡಾಕ್ಟರೇ?

★★★

ಮದುವೆಯ ಶಾಸ್ತ್ರಗಳೆಲ್ಲಾ ಮುಗಿದು, ಗಂಡನೊಡನೆ ಕಾರಿನಲ್ಲಿ ಕುಳಿತು ಮಾವನ ಮನೆಗೆ ಹೊರಟಿದ್ದ ಮದುಮಗಳು, ಕಾರು ನಿಲ್ಲಿಸಿ ತವರಿನತ್ತ ಓಡಿ ಬರುವುದನ್ನು ನೋಡಿದ ಹೆತ್ತವರಿಗೆ ಕರುಳು ಕಿತ್ತು ಬಂದಹಾಗಾಯ್ತು. ತನ್ನ ಕಣ್ಣೀರು ಒರೆಸಿಕೊಳ್ಳುತ್ತಾ ತಾಯಿ ಕೇಳಿದಳು 'ಯಾಕೆ ಮಗು, ಬಿಟ್ಟು ಹೋಗಕ್ಕೆ ಸಂಕಟವಾಯ್ತಾ?'

ಮಗಳು ಉತ್ತರಿಸಿದಳು. 'ಛೇ, ಹಾಗೇನಿಲ್ಲಮ್ಮಾ ಮೊಬೈಲ್ ಚಾರ್ಜರ್ ಮರೆತು ಬಿಟ್ಟಿದ್ದೆ. ಅದಕ್ಕೆ ಬಂದೆ...!

★★★

ತನ್ನ ಪ್ರಿಯತಮೆಯ ಜೊತೆ ಚಾಟ್ ಮಾಡುತ್ತಿದ್ದ ಹುಡುಗ 'ಪ್ರಿಯೆ ಮಲಗಿದ್ದರೆ ಕನಸುಗಳನ್ನು ಕಳಿಸು, ಎಚ್ಚರವಾಗಿದ್ರೆ ನನ್ನೊಂದಿಗೆ ಕಳೆದ ಸವಿ ನೆನಪುಗಳನ್ನು ಕಳಿಸು, ನಗುತ್ತಿದ್ದರೆ ಖುಷಿ ಕಳುಹಿಸು, ಅಳುತ್ತಿದ್ದರೆ ಕಣ್ಣೀರು ಕಳುಹಿಸು'

ಹುಡುಗಿ: ಪಾತ್ರೆ ತಿಕ್ಕುತ್ತೇನಿ, ಮುಸುರಿ ನೀರ ಕಳಿಸ್ಲೇನ್...!

★★★



ಮಗ: ಅಪ್ಪ ನಾವು ಯಾರದ್ದಾದ್ರು ಮನೆಗೆ ಹೋದ್ರೆ ಅವರು ನಮಗೆ ಕುಡಿಯೋಕೆ ಸೇಬು ಹಣ್ಣಿನ ರಸ ಕೊಟ್ರೆ ಅದಕ್ಕೆ ನಾವು ಏನಂತ ಹೇಳಬೇಕು?

ಅಪ್ಪ: ಆಪಲ್ ಜ್ಯೂಸು ಅಂತ ಹೇಳಬೇಕು

ಮಗ: ಕಿತ್ತಳೆ ಹಣ್ಣಿನ ರಸ ಕೊಟ್ರೆ?

ಅಪ್ಪ: ಆರೆಂಜ್ ಜ್ಯೂಸು

ಮಗ: ನಿಂಬೆ ಹಣ್ಣಿನ ರಸ ಕೊಟ್ರೆ?

ಅಪ್ಪ: ಲೆಮನ್ ಜ್ಯೂಸು

ಮಗ: ಬರೀ ನೀರು ಕೊಟ್ರೆ?

ಅಪ್ಪ: ಕಂಜೂಸ್!

(ಸಂಗ್ರಹ) **ಪೂರ್ಣಿಮಾ ಆರ್ ಹೆಜಮಾಡಿ**

**ಸಮಸ್ಯೆ ನಿಮ್ಮದು ಪರಿಹಾರ ನಮ್ಮದು**

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

**ಶ್ರೀಯುತ ಪರಶುರಾಮ್ ಗುರೂಜಿ**

ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. **9620444460**